ಕರ್ನಾಟಕ ಸರ್ಕಾರ

**ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ**

ವಾರ್ತಾ ಸೌಧ, ಸಂಖ್ಯೆ : 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

**ಸಂಖ್ಯೆ : ವಾಇ : ಜಂ ನಿ : ಸುಮಪ : 2020–21 :** **ಜೂನ್ 20, 2020**

# ಪತ್ರಿಕಾ ಪ್ರಕಟಣೆ

## ಗುಡಿಸಲು ರಹಿತ ರಾಜ್ಯ–ಗೃಹ ಮಂಡಳಿಯ ಗುರಿ

**–ವಸತಿ ಸಚಿವ ವಿ. ಸೋಮಣ್ಣ**

**ಬೆಂಗಳೂರು, ಜೂನ್ 20 ( ಕರ್ನಾಟಕ ವಾರ್ತೆ ) :**

ಗೃಹ ಮಂಡಳಿಯು ಜನಸಾಮಾನ್ಯರಿಗೆ ಸೂರು ಒದಗಿಸುವ ಉದ್ದೇಶದಿಂದ ಅಧಿಕಾರಿಗಳು ಬದ್ಧತೆಯಿಂದ ಕರ್ತವ್ಯ ನಿರ್ವಹಿಸಬೇಕು ಹಾಗೂ ಸಾಮಾನ್ಯ ಜನರಿಗೆ ಕಡಿಮೆ ದರದಲ್ಲಿ ಸೂರನ್ನು ಒದಗಿಸಿ, ಗುಡಿಸಲು ರಹಿತ ರಾಜ್ಯವನ್ನಾಗಿಸಲು ಶ್ರಮಿಸಬೇಕು ಎಂದು ವಸತಿ ಸಚಿವ ಹಾಗೂ ಗೃಹ ಮಂಡಳಿ ಅಧ್ಯಕ್ಷ ವಿ. ಸೋಮಣ್ಣ ತಿಳಿಸಿದರು.

ಅವರು ಇಂದು ಕರ್ನಾಟಕ ಗೃಹ ಮಂಡಳಿ ಕಚೇರಿಯಲ್ಲಿ ನಿವೇಶನ ಹಾಗೂ ಮನೆಗಳ ಹಂಚಿಕೆ ಸಂಬಂಧಿಸಿದಂತೆ ಕೈಗೊಂಡಿರುವ ಕ್ರಮಗಳ ಬಗ್ಗೆ ಜಿಲ್ಲಾವಾರು ಪ್ರಗತಿ ಪರಿಶೀಲನಾ ಸಭೆ ನಡೆಸಿ ಮಾತನಾಡಿದರು.

ಬಿಜಾಪುರದಲ್ಲಿ ಸುಮಾರು 415 ನಿವೇಶನಗಳ ಅವ್ಯವಹಾರ ನಡೆದಿದ್ದು, ಈ ಬಗ್ಗೆ ತನಿಖೆ ನಡೆಸಲು ಗೃಹ ಮಂಡಳಿ ಆಯುಕ್ತರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಿ ಒಂದು ತಿಂಗಳೊಳಗಾಗಿ ವರದಿಯನ್ನು ನೀಡಲು ಸೂಚಿಸಿದರು.

ಬಡವರಿಗೆ ಅನುಕೂಲ ಕಲ್ಪಿಸುವ ಉದ್ದೇಶವನ್ನು ಸರ್ಕಾರ ಹೊಂದಿದ್ದು ಇದರಲ್ಲಿ ಯಾವುದೇ ಲೋಪವಾದರೂ ಸಹಿಸುವುದಿಲ್ಲ. ಸೂರು ಒದಗಿಸುವಲ್ಲಿ ಅಧಿಕಾರಿಗಳು ಅವ್ಯವಹಾರ ನಡೆಸುವುದು ಕಂಡುಬಂದಲ್ಲಿ, ಅವರ ವಿರುದ್ಧ ನಿರ್ದಾಕ್ಷಣ್ಯ ಕ್ರಮ ಕೈಗೊಳ್ಳಲಾಗುವುದು ಎಂದರು.

ಬೆಂಗಳೂರಿನಲ್ಲಿ ಒಂದು ಲಕ್ಷ ಬಹುಮಹಡಿ ಕಟ್ಟಡ ಕಟ್ಟಲು ಮಂಜೂರಾಗಿದ್ದು , 48 ಸಾವಿರ ಕಟ್ಟಡಗಳಿಗೆ ಆದೇಶ ನೀಡಲಾಗಿದ್ದು, 28 ಸಾವಿರ ಕಟ್ಟಡಗಳು ಪ್ರಗತಿಯಲ್ಲಿವೆ ಎಂದರು.

ಬಹುತೇಕ ಜಿಲ್ಲೆಗಳಲ್ಲಿ ಕೆ ಹೆಚ್‌ಬಿ ನಿವೇಶನ ಮನೆಗಳು ನಿರೀಕ್ಷಿತ ಮಟ್ಟದಲ್ಲಿ ವಿಲೇವಾರಿಯಾಗುತ್ತಿಲ್ಲ. ವಿಲೇವಾರಿಗಾಗಿ ಪ್ರಚಾರ ಹಾಗೂ ಜಿಲ್ಲಾಧಿಕಾರಿಗಳ ವೆಬ್‌ಸೈಟ್‌ನಲ್ಲಿ ನಿವೇಶನ– ಮನೆಗಳ ವಿವರವನ್ನು ಪ್ರಕಟಿಸಲು ಸೂಚಿಸಿದರು. ಇನ್ನು ಮುಂದೆ ಆಸ್ತಿ ವಿಲೆವಾರಿಗೆ ಎಕ್ಸ್‌ಪೋ–ಇಲ್ಲ ದಿನನಿತ್ಯವೂ ಆಸ್ತಿ ವಿಲೇವಾರಿಗೆ ಕ್ರಮ ಕೈಗೊಳ್ಳಲಾಗುವುದು.

ನಿಗಧಿತ ಅವಧಿಯೊಳಗೆ ಕಾಮಗಾರಿಯನ್ನು ಪೂರೈಸದ ಅಭಿಯಂತರರಿಗೆ ನೋಟಿಸ್ ಜಾರಿ ಮಾಡುವಂತೆ ಮುಖ್ಯ ಇಂಜಿನಿಯರ್‌ಗಳಿಗೆ ಸೂಚಿಸಿದರಲ್ಲದೆ, ಎಲ್ಲಾ ಮಂಡಳಿಯ ಅಭಿಯಂತರರು ಇನ್ನೂ ಮುಂದೆ ಮಾಸಿಕ ದಿನಚರಿ ಸಲ್ಲಿಸಬೇಕೆಂದರು.

ಕೇಂದ್ರ ಪುರಸ್ಕೃತ ಹಾಗೂ ರಾಜ್ಯ ಸರ್ಕಾರದ ವಿವಿಧ ವಸತಿ ಯೋಜನೆಗಳಡಿ ನಗರ ಪ್ರದೇಶದಲ್ಲಿ ನಿರ್ಮಿಸುವ ಮನೆಗಳಿಗೆ ಫಲಾನುಭವಿ ಸುಮಾರು 2–3 ಲಕ್ಷ ವಂತಿಕೆ ಭರಿಸಬೇಕಿದ್ದು ಉಳಿದಂತೆ ಸರ್ಕಾರವು ಸುಮಾರು 3 ರಿಂದ 3.50 ಲಕ್ಷ ಭರಿಸುತ್ತಿತ್ತು. ಇದರಿಂದ ಬಡವರಿಗೆ ಬ್ಯಾಂಕುಗಳಲ್ಲಿ ಸಾಲ ಪಡೆಯಲು ಸಮಸ್ಯೆಯಾಗುತ್ತಿತ್ತು. ಇದನ್ನು ಪರಿಹರಿಸಲು ಸರ್ಕಾರವು ಒಂದು ಪಾಲಸಿ ನಿರ್ಣಯವನ್ನು ಕೈಗೊಂಡಿದೆ.

ಫಲಾನುಭವಿಗೆ ಮನೆಯ ಜೊತೆಗೆ ಪ್ರಮಾಣಕ್ಕನುಗುಣವಾದ ಜಮೀನು ಭಾಗವನ್ನು ನೀಡಲಾಗುವುದು. 15 ವರ್ಷದವರೆಗೆ ಪರಭಾರೆ ಮಾಡಬಾರದು. ಇದನ್ನು ಅಡಮಾನವಾಗಿ ನೀಡಿ ಬ್ಯಾಂಕಿನಲ್ಲಿ ಸಾಲ ಪಡೆಯಬಹುದು. ಈ ಬಗ್ಗೆ ಇಂದು ಸರ್ಕಾರಿ ಆದೇಶ ಹೊರ ಬೀಳಲಿದೆ ಎಂದರು.

ಸಭೆಯಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿ ಮನೋಜ್‌ಕುಮಾರ್ ಮೀನ, ಗೃಹ ಮಂಡಳಿ ಆಯುಕ್ತ ರಮೇಶ್, ಮುಖ್ಯ ಇಂಜಿನಿಯರ್ ನಂಜುಂಡಪ್ಪ ಹಾಗೂ 32 ಜಿಲ್ಲೆಯ ಅಭಿಯಂತರರುಗಳು ಹಾಗೂ ಸಂಬಂಧಿಸಿದ ಅಧಿಕಾರಿಗಳು ಉಪಸ್ಥಿತರಿದ್ದರು.

## ವಿವಿಧ ವೃಂದಗಳ ಅಗ್ನಿಶಾಮಕ ಸಿಬ್ಬಂದಿಯ 1567 ಹುದ್ದೆಗಳಿಗೆ ಅರ್ಜಿ ಆಹ್ವಾನ

ಬೆಂಗಳೂರು, ಜೂನ್ 20 ( ಕರ್ನಾಟಕ ವಾರ್ತೆ ) :

ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯು ವಿವಿಧ ವೃಂದಗಳ ಅಗ್ನಿಶಾಮಕ ಸಿಬ್ಬಂದಿಯ 1567 ಹುದ್ದೆಗಳಿಗೆ ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ.

ಅಗ್ನಿಶಾಮಕ ಠಾಣಾಧಿಕಾರಿಗಳ 36 ಹುದ್ದೆಗಳು, ಅಗ್ನಿಶಾಮಕ ಚಾಲಕರ 227 ಹುದ್ದೆಗಳು, ಚಾಲಕ ತಂತ್ರಜ್ಞರ 82 ಹುದ್ದೆಗಳು ಹಾಗೂ ಅಗ್ನಿಶಾಮಕರ 1222 ಹುದ್ದೆಗಳಿಗೆ ಈ ನೇಮಕಾತಿ ಒಳಗೊಂಡಿದೆ.

ಅಂತರ್ಜಾಲ ತಾಣ **www.ksp.gov.in** ಲಾಗ್‌ಇನ್ ಆಗಿ ಜೂನ್ 22 ಆನ್‌ಲೈನ್ ಮೂಲಕ ಅರ್ಜಿಗಳನ್ನು ಸಲ್ಲಿಸಬೇಕು. ಅರ್ಜಿಗಳನ್ನು ಸಲ್ಲಿಸಲು ಜುಲೈ 2೭ ಕೊನೆಯ ದಿನಾಂಕವಾಗಿದೆ.

ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆಗೆ ಸೇರ್ಪಡೆಯಾಗಿ ಅಮೂಲ್ಯ ಜೀವಗಳನ್ನು ರಕ್ಷಿಸಲು ಇದೊಂದು ಸದಾವಕಾಶವಾಗಿದೆ ಎಂದು ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಮಹಾ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

*********

ಡಿ ಪಿ ಎಂ : ವೈ ಸಿ ಎಸ್ : ಎಂ ಕೆ ಎಂ

## APPLICATIONS INVITED FOR 1567 POSTS OF FIRE PERSONNEL OF VARIOUS CADRES

BENGALURU, JUNE 20 ( KARNATAKA INFORMATION ) :

**The Karnataka State Fire and Emergency Services has invited applications for the recruitment of 1567 posts of fire personnel of various cadres from eligible and interested candidates.**

**This recruitment includes 36 posts of Fire Station Officers, 227 posts of Fireman Drivers, 82 posts of Driver Mechanics and 1222 posts of Firemen.**

**The applications should be submitted online by logging on to Website www.ksp.gov.in from June 22. The last date for submission of applications is July 20.**

**It is a great opportunity to join the Karnataka State Fire and Emergency Services and be a part in saving precious human lives, says Director General of Karnataka State Fire and Emergency Services.**

**DPM : YCS : MKM**